ಅಮರಯ್ಯಾ ಪತ್ರಿಮಠ, ಸುರಪೂರ

*ಕಳ್ಳರಿಗೆ ಕತ್ತಲೆ ಇಷ್ಟ. ಸುಳ್ಳರಿಗೆ?*



ಮೊದ್ದು ತಲೆ.

ನರಸಿಂಹ ಪೈ, ಹೊನ್ನಾವರ

*ಕಲಿಯುವ ಮಕ್ಕಳಿಗೆ ಕನ್ನಡ, ಇಂಗ್ಲಿಷ್‌ಗಳಲ್ಲಿ ಮೇಲಾವುದು?*

ಎರಡೂ ಸಮವೇ. ಕನ್ನಡದ ಗಡಿಯಾರಕ್ಕೆ ಇಂಗ್ಲಿಷ್‌ನ ಸೆಲ್ ತೊಡಿಸಿದರೆ ಮಕ್ಕಳ ಟೈಮ್ ಚೆನ್ನಾಗಿರುತ್ತೆ.

ವ. ಉಮೇಶ ಕಾರಂತ, ಮಂಗಳೂರು

*ಪುಸ್ತಕ ಓದದ ಮಸ್ತಕದಿಂದೇನು ಪ್ರಯೋಜನ?*

ಅವೂ ಬೇಕು; ಅಂತಹ ಮಸ್ತಕಗಳೇ ಟುಟೋರಿಯಲ್‌ಗಳ ಜೀವಾಳ.

ಜಾಕೋಬ್ ಡಿಸೋಜ, ಕುರುವಳ್ಳಿ

*ಕಲೆ ಒಳ್ಳೆಯದೆ?*

ಗಾಢವಾಗಿದ್ದಷ್ಟೂ ಒಳ್ಳೆಯದು – ಡ್ರೈ ಕ್ಲೀನ್ ಅಂಗಡಿಯವನ ಹೆಚ್ಚುವರಿ ಲಾಭಕ್ಕೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಪ್ರೀತಿಯ ಉಂಗುರ ಬೆರಳಿಗೋ, ಕೆನ್ನೆಗೋ?*



ಲೋಹದ್ದಾದರೆ ಬೆರಳಿಗೆ;
ಮೋಹದ್ದಾದರೆ........!

ಮುಕುಂದ ಹೆರಕಲ್ಲ, ಕಲಬುರ್ಗಿ

*ಮಗನಿಗೆ ಕೃಷ್ಣನ ವೇಷ ಹಾಕಿ ಆನಂದಿಸುವ ಹೆಣ್ಣು ಗಂಡ ಮಾತ್ರ ಕೃಷ್ಣನಂತಾಗಬಾರದೆನ್ನುತ್ತಾಳೆ. ಏಕೆ?*

ಮಗ ಬಾಲಕೃಷ್ಣ; ತೊಂದರೆಯಿಲ್ಲ. ಗಂಡ ಬಾಲೆಯರ ಕೃಷ್ಣ; ಬಹುಪತ್ನಿತ್ವ ಐಪಿಸಿ ಸೆಕ್ಷನ್ 495/6ರಡಿ ಶಿಕ್ಷಾರ್ಹ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಬೆಣ್ಣೆ ಕರಗಲು ಶಾಖ ಬೇಕು. ಹೆಣ್ಣಿನ ಮನಸ್ಸು ಕರಗಲು ಏನು ಬೇಕು?*

ಏನೇನೂ ಬೇಡ; ಅದು ಇರುವುದೇ ದ್ರವವಾಗಿ; ಆದ್ದರಿಂದಲೇ ಆಗಾಗ್ಗೆ ಅಷ್ಟಷ್ಟು ಕುದಿಯುವುದು.

ಎಂ.ಜಿ. ಉಮಾ, ಬಳ್ಳಾರಿ

*ಗರ್ಭದಲ್ಲಿರುವ ಶಿಶು ಹೊರಗೆ ಬರಲು ಹೆದರುವುದೇಕೆ?*

ಜೀವನ ನಾಟಕದ ಮೊದಲ ಷೋ ಆದ್ದರಿಂದ ಸ್ಟೇಜ್ ಫಿಯರ್ ಇರುತ್ತದಲ್ಲ!

ಕೆ.ಎಂ. ವಿಭೂತಿ, ಹರಿಹರ

*ಹದಿಹರೆಯದ ಹುಡುಗರ ಸೌಂದರ್ಯ ಅವರ ಮೀಸೆ, ಗಡ್ಡದಲ್ಲಿ ಅಡಗಿದೆಯಂತೆ, ಹೌದಾ?*

ಊಹೂಂ. ಹದಿಹರೆಯದ ಹುಡುಗಿಯರ ಕಣ್ಣಿನಲ್ಲಿ.

ಜವಳಿ ಜಯ್ಯಣ್ಣ, ದಾವಣಗೆರೆ

*ಗೃಹಸ್ಥಾಶ್ರಮಕ್ಕೆ ಕಾಲಿಡುವ ಮೊದಲು ಬ್ರಹ್ಮಚಾರಿ ಯಾವ ಪೂರ್ವಸಿದ್ಧತೆ ಮಾಡಿಕೊಂಡಿರಬೇಕು?*

ಪೂರ್ವದ್ದಲ್ಲ, ಉತ್ತರದ್ದು; ಮಡದಿಯ ಎಲ್ಲ ಪ್ರಶ್ನೆಗಳಿಗೆ ಆಕೆ ಮೆಚ್ಚಿ ಅಹುದಹುದೆನ್ನುವಂತೆ ಉತ್ತರಿಸುವ ಸಿದ್ಧತೆ ಮಾಡಿಕೊಳ್ಳಬೇಕು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಹೆಣ್ಣು, ಹೊನ್ನು, ಮಣ್ಣು ಎನ್ನುವರಲ್ಲ, ಹೆಣ್ಣು ಭೌತಿಕ ವಸ್ತುವೆಂದು ಪರಿಗಣಿಸುವುದು ಸರಿಯೆ?*

ಅಲ್ಲವಾದರೂ ಬಾಳನ್ನು ಹೊನ್ನಾಗಿಯೂ, ಮಣ್ಣಾಗಿಯೂ ಪರಿವರ್ತಿಸಬಲ್ಲ ಶಕ್ತಿಯಾದ್ದರಿಂದ ಒಟ್ಟಿಗೆ ಹೇಳಲಾಗುವುದಂತೆ.

ಫಾಲನೇತ್ರ ಸಜ್ಜನ, ಶಿರಸಿ

*ಪುಷ್ಪಕ ವಿಮಾನವಿದ್ದ ಕಾಲದಲ್ಲಿ ಮೊಬೈಲ್ ಆವಿಷ್ಕಾರಗೊಂಡಿರಲಿಲ್ಲವೆ?*

ಹ್ಹ! ಮೊಬೈಲ್ ಚಿಲ್ರೆ ಆವಿಷ್ಕಾರ; ತಪದಿಂದಲೇ ದೇವನಿಗೆ ಕಾಲ್ ತಲುಪಿಸುತ್ತಿದ್ದ ಬ್ಯುಲ್ಟಿನ್ ಟವರ್‌ಗಳಾಗಿದ್ದರು ಋಷಿಗಳು!

ಎ.ಕೆ. ಪಟ್ಟಾಭಿ, ಬೆಂಗಳೂರು

*ಕೆಟ್ಟಕಾಲ ಬಂದಾಗ ಕತ್ತೆಕಾಲು ಕಟ್ಟು ಎನ್ನುತ್ತಾರೆ. ಅಕಸ್ಮಾತ್ ಕತ್ತೆ ಒದ್ದುಬಿಟ್ಟರೆ ಗತಿ?*

ಮುಂಗಾಲಿಗೆ ಬೀಳಿ! ರಾಜಕಾರಣಿಯ ಮುಂದೆ, ಕತ್ತೆಯ ಹಿಂದೆ ಇದ್ದರೆ ಮಾತ್ರ ಒದೆ ಖಚಿತ.

## ಬಹುಮಾನಿತ ಪ್ರಶ್ನೆ

ಎಂ.ಎನ್. ಸೋಮಶೇಖರ್, ಮೈಸೂರು

*ಅಪಾರ ನಿಧಿಗೂ, ವಿಷಸರ್ಪಕ್ಕೂ ಏನು ಸಂಬಂಧ?*

ಅಪಾರ ನಿಧಿ ವಿಷಕ್ಕೆ ಸಮಾನವೆಂದು ಹೇಳಲು ಸರ್ಪವೇ ಸಿಂಬಲ್.

ಸಾಲಿಗ್ರಾಮ ದೇವರಾಜು, ಮೈಸೂರು

*ಬದುಕು ಕಳೆದುಹೋದಲ್ಲೇ ಹುಡುಕುತ್ತಿದ್ದೇನೆ. ಸಿಗುತ್ತಿಲ್ಲ. ಮುಂದೆ?*

ಇರುವುದೂ ಕಳೆದುಹೋಗುವ ಮುನ್ನ ಸ್ವಾನುಕಂಪದಿಂದ ಹೊರಬನ್ನಿ; ತಲೆ ತಗ್ಗಿದರೆ ವಶ; ತಲೆಯೆತ್ತಿದರೆ ಯಶ.

ಚೆಲುವನಹಳ್ಳಿ ರಾಜಶೇಖರ, ಹಾಸನ

*ಚುನಾವಣಾ ಸಮಯದ ಹೊರತು ತನ್ನ ಕ್ಷೇತ್ರಕ್ಕೆ ಬಾರದಿರುವ ರಾಜಕಾರಣಿಗಳ ಬಗ್ಗೆ ನಿಮ್ಮ ಟೀಕೆ?*

ಟೀಕೆ? ಕಡಿಯಲು ಸಿಕ್ಕ ಮೂಳೆಯನ್ನು ಕಚ್ಚಿಕೊಂಡು ಓಡಿದ ಶ್ವಾನಕ್ಕೆ ಏನೆಂದೇನು ಪ್ರಯೋಜನ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಅರ್ಜಿಗೂ, ಅಲರ್ಜಿಗೂ ಏನು ವ್ಯತ್ಯಾಸ?*



ಲಂಚದೊಂದಿಗೆ ಮನವಿ ಬಂದರೆ ಅರ್ಜಿ; ಲಂಚವಿಲ್ಲದ ಅರ್ಜಿಯೇ ಅಲರ್ಜಿ ಎಂದನಾ ಲಂಚಜ್ಞ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ನೀವು ರಾಜ್ಯಾಧ್ಯಂತ 'ಉತ್ತರ ಪರ್ವ' ಯಾತ್ರೆ ಮಾಡಿದರೆ ಬರೆಯಲು ಬಾರದವರ ಪ್ರಶ್ನೆಗಳಿಗೂ ಉತ್ತರಿಸಬಹುದಲ್ಲವೆ?*

ಒಳ್ಳೆಯ ಯೋಚನೆ; ಸುಧಕ್ಕ ಅಂಕಣವಲ್ಲದೆ ಅಂಗಳಕ್ಕೂ ಕಾಲಿಟ್ಟಾಗ ಕೈಗೊಳ್ಳುವ.

ವಿ. ಹಮೀದ್, ವಿಟ್ಲ

*ಪರಸ್ತ್ರೀಯರ ಸೌಂದರ್ಯ ನೋಡುವುದು ತಪ್ಪೆ?*

ತಪ್ಪಿಲ್ಲ – ನೋಟದಲ್ಲಿ ಕಾಟ, ಬೇಟ ಇರಬಾರದಷ್ಟೆ.

■ ರಾಮ್